ಶ್ರೀ ಜೆ. ಹೆಚ್. ಪಟೇಲ್.—ನಾನು ಜವಾಬ್ದಾರಿಯಿಂದ ಉತ್ತರ ಕೊಟ್ಟಿದ್ದೀನೋ. ಬೇಜವಾಬ್ದಾರಿಯಿಂದ ಉತ್ತರ ಕೊಟ್ಟಿದ್ದೀನೋ ಎಂಬುದನ್ನು ಸದಸ್ಯರ ಅಭಿಪ್ರಾಯಕ್ಕೇ ಬಿಡುತ್ತೇನೆ. ನಾನು ಹೇಳಿದ್ದು ಏನೆಂದರೆ ೫೫ ಸಾವಿರ ಟ್ರಾನ್ಸ್‌ಫಾರ್ಮರುಗಳನ್ನು ಕೊಂಡುಕೊಂಡಿರುವಾಗ ಆದರಲ್ಲಿ ೫ ಸಾವಿರ ಟ್ರಾನ್ಸ್‌ಫಾರ್ಮರುಗಳು ಕೆಡಬಹುದೆಂದು ಹೇಳಿದ್ದೇನೆ. ಕೆಡದೇ ಇರತಕ್ಕಂಥ ಟ್ರಾನ್ಸ್‌ಫಾರ್ಮರುಗಳನ್ನು ಇದುವರೆಗೆ ಯಾರೂ ತಯಾರು ಮಾಡಿಲ್ಲ. ಟ್ರಾನ್ಸ್‌ಫಾರ್ಮರುಗಳು ಬರ್ನ್ ಆಗುವುದರಿಂದ ಸರ್ವೀಸ್‌ಗೆ ತೊಂದರೆಯಾಗುತ್ತದೆ ಎಂಬುದು ಎಲ್ಲರಿಗೂ ಗೊತ್ತು. ಇರಿಗೇಷನ್ ಪಂಪ್‌ಸೆಟ್ ಆಗಬಹುದು. ಇಂಡಸ್ಟ್ರಿಗಳಾಗಬಹುದು ಇವುಗಳಿಗೆ ವೋಲ್ಟೇಜ್ ಡ್ರಾಪ್ ಆದರೆ ತೊಂದರೆಯಾಗುತ್ತದೆ. ಇದಕ್ಕಾಗಿ ಸಿಸ್ಟವಮ್ ಇಂಪ್ರೂವ್‌ಮೆಂಟ್ ಸ್ಕೀಮ್‌ನ್ನು ನಾವು ಜಾರಿ ಮಾಡುತ್ತಿದ್ದೇವೆ. ಒಂದೇ ಟ್ರಾನ್ಸ್‌ಫಾರ್ಮರ್ ಮೇಲೆ ಬೀಳುವ ಹೆಚ್ಚು ಲೋಡನ್ನು ಕಡಿಮೆ ಮಾಡುವುದಕ್ಕಾಗಿ ಹೆಚ್ಚು ಟ್ರಾನ್ಸ್‌ಫಾರ್ಮರುಗಳನ್ನು ಜೋಡಿಸಿ ಉತ್ತಮ ರೀತಿಯಲ್ಲಿ ಟ್ರಾನ್ಸ್‌ಫಾರ್ಮರುಗಳು ಕೆಲಸ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಇಂಪ್ರೂವ್‌ಮೆಂಟ್ ಕೆಲಸ ಮಾಡುತ್ತಾ ಹೋಗುತ್ತಿದ್ದೇವೆ. ಆಮೇಲೆ ಮಾನ್ಯ ಸದಸ್ಯರು ಯಾರೋ ರಿಟೈರ್ಡ್ ಆಫೀಸರ್ ಮೂಲಕ ಟ್ರಾನ್ಸ್‌ಫಾರ್ಮರ್‌ಗಳನ್ನು ಕೊಂಡುಕೊಳ್ಳುತ್ತಿದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ, ಅದರ ಬಗ್ಗೆ ನನಗೆ ಬರೆದು ತಿಳಿಸಿದರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ಪ್ರಶ್ನೆಗಳ ವೇಳೆ ಮುಕ್ತಾಯವಾಯಿತು. ಆದರೂ ಇನ್ನೂ ೧೦ ಪ್ರಶ್ನೆಗಳು ಹಾಗೆ ಉಳಿದುಕೊಂಡಿವೆ. ಈ ೧೦ ಪ್ರಶ್ನೆಗಳಲ್ಲಿ ೯ ಪ್ರಶ್ನೆಗಳಿಗೆ ಸರ್ಕಾರದಿಂದ ಉತ್ತರ ಬಂದಿರುವುದರಿಂದ ಪುನ: ಆಬ್ಸೆಂಟ್ ಆದವರ ಹೆಸರುಗಳನ್ನು ಕರೆಯುತ್ತೇನೆ, ಯಾರು ಪ್ರಶ್ನೆ ಹಾಕಿರುತ್ತಾರೋ ಅವರು ಮಾತ್ರ ಕೇಳಬೇಕು. ಮಾನ್ಯ ಸದಸ್ಯರುಗಳ ವಂತ್ತು ಸಾರ್ವಜನಿಕರ ಹಿತ ದೃಷ್ಟಿಯಿಂದ ವಂತ್ತೆ ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಡುತ್ತಿದ್ದೇನೆ. ಒಬ್ಬರು ಒಂದು ಸಪ್ಲಿಮೆಂಟರಿ ಪ್ರಶ್ನೆಯನ್ನು ಮಾತ್ರ ಕೇಳತಕ್ಕದ್ದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಆಬ್ಸೆಂಟ್. ಶ್ರೀ ವಸಂತ ಬಂಗೇರಾ ಅವರೇ ತಾವು ಕೇಳಿ.

ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಜಲಪಾತಗಳಿಂದ ವಿದ್ಯುತ್ ಉತ್ಪಾದಿಸುವ ಬಗ್ಗೆ

೪೦೫೮ ಶ್ರೀ ಕೆ. ವಸಂತ ಬಂಗೇರ(ಬೆಳ್ತಂಗಡಿ)....ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಸುಮಾರು ೧೦೦ ರಿಂದ ೩೦೦ ಅಡಿಗಳಷ್ಟು ಎತ್ತರದಿಂದ ಧುಮುಕುವ ಹಲವು ಜಲಪಾತಗಳಿದ್ದು, ಇದರಿಂದ ವಿದ್ಯುತ್ ಉತ್ಪಾದನೆ ಮಾಡಲು ಸಾಧ್ಯವಿದೆ ಈ ಕುರಿತು ಶೀಘ್ರ ಅನ್ವೇಷಣೆಗೆ ಪಾಗೂ ಸೂಕ್ತ ಕ್ರಮ ಕೈಗೊಳ್ಳುವಿರಾ,

ಆ) ತಾಲ್ಲೂಕಿನ ಜನತೆಗೆ ತೊಂದರೆಯಾಗುವ ಹಾಗೂ ಜನತೆ ವಿರೋಧಿಸುತ್ತಿರುವ "ನೆರಿಯಾ ಯೋಜನೆಯನ್ನು" ಕೈ ಬಿಟ್ಟು ಮೇಲ್ಕಾಣಿಸಿದ ಯೋಜನೆಯನ್ನು ಎಷ್ಟು ಸಮಯದೊಳಗೆ ಕೈಗೊಳ್ಳುತ್ತೀರಿ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು).—

ಅ) ಹೌದು

ಆ) ಅನ್ವೇಷಣಾ ಕೆಲಸವನ್ನು ಪ್ರಾರಂಭಿಸಿ ಆದಷ್ಟು ಬೇಗನೆ ಮುಗಿಸಲಾಗುವುದು.

ಶ್ರೀ ಜೆ. ಹೆಚ್. ಪಟೇಲ್.—ಉತ್ತರವನ್ನು ಕೊಟ್ಟಿದ್ದೇನೆ. ಮಿನಿ ವಿದ್ಯುತ್ ಯೋಜನೆಗಳನ್ನು ಸಹ ನಾವು ಮಾಡುತ್ತೇವೆ.

ಶ್ರೀ ಕೆ. ವಸಂತ ಬಂಗೇರ.—ಯಾವಾಗಿನಿಂದ ಪ್ರಾರಂಭಿಸುತ್ತೀರಿ ಮತ್ತು ಯಾವ ಯಾವ ಯೋಜನೆಗಳನ್ನು ಕೈಗೆತ್ತಿಕೊಳ್ಳುತ್ತೀರಿ ಎಂಬುದನ್ನು ಹೇಳಬೇಕು. ಏಕೆಂದರೆ ನನ್ನ ತಾಲ್ಲೂಕಿನಲ್ಲೇ ಸುಮಾರು ೭ ಕಡೆ ಸಣ್ಣ ಜಲಪಾತಗಳಿದ್ದು ಅವುಗಳಿಂದ ಜಲವಿದ್ಯುತ್ ತಯಾರಿಸಬಹುದೆಂಬುದನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಈ ಯೋಜನೆಗಳ ಬಗ್ಗೆ ಒಂದು ಬಗೆಯ ಅಸ್ಪಷ್ಟತೆ ಕಾಣುತ್ತಿದೆ. ಹೇಗೆಂದರೆ ನನ್ನ ತಾಲ್ಲೂಕಿನಲ್ಲೇ ನೆರಿಯ ಯೋಜನೆ ಎಂಬುದನ್ನು ಕೈಗೆತ್ತಿಕೊಂಡು ಅನೇಕ ವರ್ಷಗಳಿಂದ ಸರ್ವೆ ಕೆಲಸ ನಡೆಯುತ್ತಿದೆ. ಅದನ್ನು ಮಾಡುತ್ತಿರುವವರು ರಾಜ್ಯವೋ ಕೇಂದ್ರವೋ ಗೊತ್ತಿಲ್ಲ. ಹಿಂದೆ ವಿಧಾನಸಭೆಯಲ್ಲಿ ಈ ಬಗ್ಗೆ ಪ್ರಶ್ನೆ ಹಾಕಿದಾಗ ಅದಕ್ಕೆ ರಾಜ್ಯ ಸರ್ಕಾರ ಒಪ್ಪಿಗೆ ಕೊಟ್ಟಿಲ್ಲವೆಂದು ತಿಳಿಯಿತು. ಆದರೂ ಕೆಲಸ ನಡೆಯುತ್ತಿದೆ. ಅಲ್ಲಿ ಮರ ಕಡಿಯುವ ಕೆಲಸ ಆರಂಭಗೊಂಡಿದ್ದರಿಂದ ಮಂಗನ ಕಾಯಿಲೆ ಪ್ರಾರಂಭವಾಯಿತು. ಇದು ಅಥಾರಿಟೀಸ್‌ಗೆ ಏಕೆ ಬೇಕಾಗಿದೆ ಎಂದರೆ ಆ ಯೋಜನೆಯಿಂದ ವಿದ್ಯುತ್‌ನ್ನು ಉತ್ಪಾದಿಸುತ್ತಾರಂತೆ. ಜೊತೆಗೆ ಮಂಗಳೂರಿನ ಜನರಿಗೆ ನೀರು ಒದಗಿಸುತ್ತಾರಂತೆ. ಅಂದರೆ ಸುಮಾರು ೧೦ ಗ್ರಾಮಗಳನ್ನು ಮುಳುಗಿಸಿ ಒಂದು ಪಟ್ಟಣಕ್ಕೆ ನೀರು ಕುಡಿಸುವ ಯೋಜನೆ ಇದು. ಈ ೧೦ ಗ್ರಾಮಗಳ ವ್ಯಾಪ್ತಿಯಲ್ಲಿ ಸಾವಿರಾರು ಎಕರೆ ಕಾಡು ಬಂದು ಅದು ಕಡಿಯಲ್ಪಡುವುದರಿಂದ ಮತ್ತೆ ಮಂಗನ ಕಾಯಿಲೆ ನನ್ನ ಕ್ಷೇತ್ರದಲ್ಲಿ ಕಾಣಬಹುದೆಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ ಆ ಯೋಜನೆಯನ್ನು ಕೈಬಿಟ್ಟು ಕಾಡು ಕಡಿಯುವುದನ್ನು ನಿಲ್ಲಿಸಬೇಕೆಂದು ಕೇಳುತ್ತ, ನಾನು ನನ್ನ ಕ್ಷೇತ್ರದಲ್ಲಿ ಬರುವುದೆಂದು ಹೇಳಿರುವ ೭ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕೆಂದು ಕೋರುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಈಗಾಗಲೇ ಸರ್ವೆಯಾಗಿರುವ ಪ್ರಕಾರ ಸುಮಾರು ೨೩೦ ಕಡೆ ಮಿನಿ ಹೈಡೆಲ್ ಪ್ರಾಜೆಕ್ಟ್‌ಸ ಮಾಡಬಹುದಾಗಿದೆ. ಅವುಗಳಲ್ಲಿ ಸದಸ್ಯರು ಹೇಳಿದ ೭ ಜಲಪಾತಗಳೂ ಸೇರಿರಬಹುದು. ಸರ್ಕಾರವಂತೂ ವಿದ್ಯುತ್ ಉತ್ಪಾದಿಸುವ ಯಾವ ಅವಕಾಶವನ್ನೂ ಕಳೆದು ಕೊಳ್ಳುವುದಿಲ್ಲ. ಈವನ್ ಖಾಸಗಿಯವರಿಗೂ ಮಾಡಿ ಎಂದು ಹೇಳಿದ್ದೇನೆ. ಇನ್ನು ಮಾನ್ಯ ಸದಸ್ಯರು ಹೇಳಿದ ನೆರಿಯಾ ಯೋಜನೆಗೆ ನನ್ನ ಗಮನಕ್ಕೆ ಬಂದಿಲ್ಲ. ಇವರ ಊರುಗಳನ್ನು ಮುಳುಗಿಸಿ ಪಟ್ಟಣಕ್ಕೆ ನೀರು ಕೊಡುವುದು ಸರ್ಕಾರದ ನೀತಿಯಲ್ಲ. ಈ ವಿಷಯ ಈಗ ನನ್ನ ಗಮನಕ್ಕೆ ಬಂದಿದೆ. ಅದನ್ನು ಪರಿಶೀಲಿಸುತ್ತೇನೆ.

ಮೈಸೂರು ಗಂಧದೆಣ್ಣೆ ಕಾರ್ಖಾನೆಯ ಎಣ್ಣೆ ಉತ್ಪಾದನೆ ಬಗ್ಗೆ

೪೧೯೦ ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಭಾರಿ ಮತ್ತು ವಂಧ್ಯಮ ಪ್ರಮಾಣದ ಉದ್ಯಮಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ನಗರದಲ್ಲಿನ ವಿಶ್ವವಿಖ್ಯಾತ ಗಂಧದೆಣ್ಣೆ ಕಾರ್ಖಾನೆಯಲ್ಲಿ ಎಣ್ಣೆಯನ್ನು ಮತ್ತೆ ಉತ್ಪಾದಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಆ) ಕಾರ್ಖಾನೆಗೆ ಗಂಧದೆಣ್ಣೆ ಉತ್ಪಾದಿಸಲು ಗಂಧದ ಮರ ಸರಬರಾಜು ಮಾಡಲು ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೆ ?

ಇ) ಕಾರ್ಖಾನೆಯಲ್ಲಿ ಉತ್ಪಾದನೆ ಇಲ್ಲದೆ ಇರುವಾಗ ಅಲ್ಲಿಯ ನೌಕರರಿಗೆ ಪರ್ಯಾಯ ಯಾವ ಉದ್ಯೋಗವನ್ನು ಒದಗಿಸಿದ್ದೀರಿ, ಮತ್ತು ಈಗ ಯಾವ ವಸ್ತುಗಳನ್ನು ಉತ್ಪಾದಿಸಲಾಗುತ್ತಿದೆ ?

ಶ್ರೀ ಜೆ. ಎಚ್. ಪಟೇಲ್ (ಭಾರಿ ಮಧ್ಯಮ ಕೈಗಾರಿಕೆ ಮತ್ತು ವಿದ್ಯುತ್ ಸಚಿವರು).—

ಅ) ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಆ) — ಸದು —